■ ಹನಿ

## ಕಚ್ಚೋ ಸ್ಟಾರ್!

ಗೋಲು ಹೊಡೆದವನನ್ನು ಹೀರೋ ಆಗಿ ಮೆರೆಸುವುದು ಸಹಜ. ಆದರೆ ಮೈದಾನದಲ್ಲಿ ಎದುರಾಳಿಗೆ ಕಚ್ಚಿದವನು ಹೀರೋ ಆಗುವುದು ಇದೇ ಹೊಸತು. ವಿಶ್ವಕಪ್ ಫುಟ್ಬಾಲ್ ಪಂದ್ಯದಲ್ಲಿ ಉರುಗ್ವೆಯ ಲೂಯಿಸ್ ಸ್ವಾರೆಸ್ ಎದುರಾಳಿ ಇಟಲಿ ತಂಡದ ಜಾರ್ಜಿಯಾ ಚಿಯನೆಲ್ಲಿಯ ಎಡಭುಜ ಕಚ್ಚಿದ ಬಳಿಕ ಅತಿದೊಡ್ಡ ಹೀರೋ ಆಗಿದ್ದಾನೆ! ಕಚ್ಚುಬಾಕ ಸ್ವಾರೆಸ್‌ನಿಗೆ 4 ತಿಂಗಳ ಕಾಲ ಫುಟ್‌ಬಾಲ್ ಆಡದಂತೆ ಫಿಫಾ ನಿಷೇಧ ಹೇರಿದೆ. ಇದರಿಂದಾಗಿ ಈತ ವಿಶ್ವಕಪ್‌ನ ಎರಡನೇ ಹಂತದ ಪಂದ್ಯಗಳಿಂದ ಹೊರಬಿದ್ದಿದ್ದಾನೆ. ಮುಂದಿನ ನಾಲ್ಕು ತಿಂಗಳಲ್ಲಿ ನಡೆಯಲಿರುವ ಪ್ರೀಮಿಯಂ ಲೀಗ್‌ನ 9 ಪಂದ್ಯಗಳಲ್ಲೂ ಆಡುವಂತಿಲ್ಲ. ಯಾವ ಫುಟ್‌ಬಾಲ್ ಪಂದ್ಯ ನಡೆಯುವ ಸ್ಟೇಡಿಯಂ ಒಳಗೂ ಹೋಗುವಂತಿಲ್ಲ. ಫುಟ್‌ಬಾಲ್ ತರಬೇತಿಯಲ್ಲಿ ಮತ್ತು ಪ್ರಚಾರದಲ್ಲೂ ಭಾಗವಹಿಸು–ವಂತಿಲ್ಲ. ಜತೆಗೆ ಎದುರಾಳಿ ಆಟಗಾರನನ್ನು ಕಚ್ಚಿದ್ದಕ್ಕಾಗಿ 1.12 ಲಕ್ಷ ಡಾಲರ್ ದಂಡವನ್ನೂ ನೀಡಬೇಕಿದೆ. ಇಷ್ಟೆಲ್ಲ ಆದರೂ ಆತ ಸ್ವದೇಶ ಉರುಗ್ವೆಯಲ್ಲಿ ಇದೀಗ ಹೀರೋ! ನಿಷೇಧ ಹೇರಿದ ಬಳಿಕ ನೆಟ್ಟಗೆ ವಿಮಾನದಲ್ಲಿ ಸ್ವದೇಶಕ್ಕೆ ಪ್ಯಾಕಪ್ ಆದ ಆತನನ್ನು ಸ್ವಾಗತಿಸಲು ವಿಮಾನ ನಿಲ್ದಾಣದಲ್ಲಿ ನೂರಾರು ಜನ ಸೇರಿದ್ದರು! ಉರುಗ್ವೆಯ ರಾಷ್ಟ್ರಾಧ್ಯಕ್ಷರೇ ಆತನನ್ನು ಸ್ವಾಗತಿಸಲು ಕಾದು ನಿಂತಿದ್ದರು!



ಎದುರಾಳಿಯನ್ನು ಕಚ್ಚುವುದು ಸ್ವಾರೆಸ್‌ಗೆ ಹೊಸತೇನೂ ಅಲ್ಲ. ಡಚ್ ಕ್ಲಬ್ ಅಜಾಕ್ಸ್ ಪರ ಆಡುತ್ತಿದ್ದ ಆತ 2010ರಲ್ಲಿ ಹೀಗೆಯೇ ಎದುರಾಳಿ ಓಟ್ಮನ್ ಬಕಲ್‌ನ ಕುತ್ತಿಗೆಗೆ ಕಚ್ಚಿದ್ದ. ಆಗ 7 ಪಂದ್ಯಗಳ ನಿಷೇಧ ವಿಧಿಸ–ಲಾಗಿತ್ತು. 2011ರಲ್ಲಿ ಪ್ರೀಮಿಯರ್ ಲೀಗ್‌ನಲ್ಲಿ ಕರಿಯ ಆಟಗಾರನ ವಿರುದ್ಧ ಜನಾಂಗೀಯ ನಿಂದನೆಗೈದು 40 ಸಾವಿರ ಪೌಂಡ್ ದಂಡ ನೀಡಿದ್ದಲ್ಲದೆ 8 ಪಂದ್ಯಗಳ ನಿಷೇಧ ಅನುಭವಿಸಿದ್ದ. 2013ರಲ್ಲಿ ಚಿಲಿ ಆಟಗಾರನ ತೋಳು ಕಚ್ಚಿ ಮತ್ತೆ 10 ಪಂದ್ಯಗಳ ನಿಷೇಧ ಎದುರಿಸಿದ. ಹೀಗೆಯೇ ಮುಂದುವರಿದರೆ ಈತ ಆಡಿದ್ದಕ್ಕಿಂತ ನಿಷೇಧ ಅನುಭವಿಸಿದ ಪಂದ್ಯಗಳ ಸಂಖ್ಯೆಯೇ ಹೆಚ್ಚಾಗಿ ಅದೂ ಒಂದು ವಿಶ್ವದಾಖಲೆ ಆಗಬಹುದು! ಸ್ವಾರೆಸ್‌ಗೆ ಆಟವಾಡಲು ಬರುವುದಿಲ್ಲ ಎಂದಲ್ಲ. 2013–14ನೇ ಸಾಲಿನ ಇಂಗ್ಲಿಷ್ ಲೀಗ್‌ನಲ್ಲಿ ಒಟ್ಟು 31 ಗೋಲುಗಳನ್ನು ಬಾರಿಸಿ ಆತ ರೊನಾಲ್ಡೊ ಜತೆಗೆ 'ಗೋಲ್ಡನ್ ಬೂಟ್' ಪ್ರಶಸ್ತಿ ಹಂಚಿಕೊಂಡವನು! ಲಿವರ್‌ಪೂಲ್ ಜತೆಗೆ 2011ರಲ್ಲಿ 22.8 ದಶಲಕ್ಷ ಡಾಲರ್‌ಗೆ ಒಪ್ಪಂದ ಮಾಡಿಕೊಂಡ ಈತನನ್ನು, ರಿಯಲ್ ಮ್ಯಾಡ್ರಿಡ್ ಕ್ಲಬ್ 80 ದಶಲಕ್ಷ ಯೂರೋ ನೀಡಿ ಖರೀದಿಸಲೂ ಯತ್ನಿಸಿತ್ತು.

9ರ ಎಳವೆಯಲ್ಲೇ ಈತನ ಅಪ್ಪ– ಅಮ್ಮ ಡೈವೋರ್ಸ್ ಪಡೆದುಕೊಂಡರು. ಬೀದಿಯಲ್ಲಿ ಫುಟ್‌ಬಾಲ್ ಆಡುತ್ತಾ ಬಡತನದಲ್ಲಿ ಬೆಳೆದ ಈತ ಎಳವೆಯಲ್ಲೇ ಬೀದಿ ಕಸ ಗುಡಿಸುವ ಉದ್ಯೋಗವನ್ನೂ ಮಾಡಿದ್ದಾನೆ. 15ರ ಹರೆಯದಲ್ಲಿ ಮಾಡೆಲ್ ಸೋಫಿಯಾ ಬಲ್ಬಿಯನ್ನು ಮದುವೆಯಾದ. ಒಂದು ಗಂಡು ಮತ್ತು ಒಂದು ಹೆಣ್ಣು ಮಗುವಿನ ಅಪ್ಪನಾಗಿರುವ 27ರ ಹರೆಯದ ಸ್ವಾರೆಸ್, ಮೈದಾನದ ಬದಲು ಹೊರಗೆ ರಸ್ತೆಯಲ್ಲಿ ಎದುರಾಳಿಗಳನ್ನು ಕಚ್ಚಿದರೆ ಕೆಲವು ತಿಂಗಳ ಕಾಲ ಜೈಲುಶಿಕ್ಷೆ ಸಿಗುವುದಂತೂ ಖಂಡಿತಾ!




## ಮಾಡೆಲ್ ಸೈನಾ

ಲೈಫ್‌ಸ್ಟೈಲ್ ಮ್ಯಾಗಸಿನ್‌ಗಳು ಚಿತ್ರನಟಿಯ–ರನ್ನು ತಮ್ಮ ಮುಖಪುಟದಲ್ಲಿ ಮೆರೆಸುವುದು ಹೊಸತೇನೂ ಅಲ್ಲ. ಆದರೆ ಇತ್ತೀಚೆಗೆ ಸಿನಿಮಾ ನಟಿಯರನ್ನು ಹಿಂದಿಕ್ಕಿ ಆಟಗಾರ್ತಿಯರು ಮ್ಯಾಗಸಿನ್‌ಗಳಿಗೆ ಅನಿವಾರ್ಯ ಅನ್ನಿಸಿ–ಕೊಳ್ಳುತ್ತಿದ್ದಾರೆ. ಸಾನಿಯಾ ಮಿರ್ಜಾ, ಜ್ವಾಲಾ ಗುಟ್ಟಾ ಮುಂತಾದ ಆಟಗಾರ್ತಿಯರು ಸ್ಟಾರ್ ಅಟ್ರಾಕ್ಷನ್ ಆದದ್ದು ಹಳೇ ಕಥೆ. ಇದೀಗ ಯಾವ ಮ್ಯಾಗಸಿನ್ ನೋಡಿದರೂ ಅದರ ಮುಖಪುಟ–ದಲ್ಲಿ ಸೈನಾ ನೆಹ್ವಾಲ್ ಫೋಟೊ! ದಿನನಿತ್ಯದ ಬ್ಯಾಡ್ಮಿಂಟನ್ ಪ್ರಾಕ್ಟೀಸ್‌ನಿಂದ ಸ್ಲಿಮ್ ಅಂಡ್ ಫಿಟ್ ಆಗಿರುವ ಸುಂದರಿ ಸೈನಾ ಬಾಲಿವುಡ್ ತಾರೆಯರಿಗಿಂತಲೂ ಹೆಚ್ಚು ಜನಪ್ರಿಯೆ.

15ರ ಹರೆಯದಲ್ಲೇ ಶಾಲೆಗೆ ಗುಡ್‌ಬೈ ಹೇಳಿ ಪೂರ್ಣಪ್ರಮಾಣದ ಬ್ಯಾಡ್ಮಿಂಟನ್ ಆಟಗಾರ್ತಿ–ಯಾದ ಸೈನಾ, 16ರ ಹರೆಯದಲ್ಲಿ ಫಿಲಿಪ್ಪೀನ್ಸ್ ಓಪನ್ ಪ್ರಶಸ್ತಿ ಪಡೆದು ಮಿಂಚಿದಾಕೆ. ಅಲ್ಲಿಂದ 2012ರವರೆಗೆ ಆಕೆಯದ್ದು ಏರುಗತಿಯ ಸಾಧನೆ. ಕಾಮನ್‌ವೆಲ್ತ್ ಕೂಟದಲ್ಲಿ ಚಿನ್ನದ ಪದಕ, ರಾಜೀವ್ ಗಾಂಧಿ ಖೇಲ್‌ರತ್ನ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಕೊನೆಗೆ ಒಲಿಂಪಿಕ್ಸ್ ಕಂಚು! ಗೋಪಿಚಂದ್ ಪುಲ್ಲೇಲ ಕೋಚ್ ಆದ ಬಳಿಕ ಸೈನಾ ಆಟ ಹೆಚ್ಚು ಕಳೆಗಟ್ಟಿತು. ಸ್ಕೂಲ್‌ನಲ್ಲಿ ಸ್ಟೇಜ್ ಮೇಲೆ ಹೋಗಿ ಪದ್ಯ ಓದುವಾಗ ತಡವರಿಸುತ್ತಿದ್ದ ಹುಡುಗಿ, ಈಗ ಕ್ಯಾಮೆರಾ ಮುಂದೆ ಚಟಪಟನೆ ಮಾತನಾಡುತ್ತಾಳೆ. 'ಪ್ಲೇಯಿಂಗ್ ಟು ವಿನ್' ಎಂಬ ಆತ್ಮಕಥೆಯನ್ನೂ ಬರೆದು ಎಳೆಯರಿಗೆ ಸ್ಫೂರ್ತಿಯ ಕೇಂದ್ರಬಿಂದು–ವಾಗಿದ್ದಾಳೆ. ಇದನ್ನು ಬರೆಯುವ ಹೊತ್ತಿಗೆ ಆಸ್ಟ್ರೇಲಿಯನ್ ಓಪನ್‌ನಲ್ಲಿ ಭರ್ಜರಿ ಕೈಚಳಕ ಮೆರೆದಿದ್ದಾಳೆ.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65